# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2222 |
| ಸದಸ್ಯರ ಹೆಸರು | ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ |
| ಉತ್ತರಿಸುವ ದಿನಾಂಕ | 31-03-2020 |
| ಉತ್ತರಿಸುವವರು | ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು |

| | ಪ್ರಶ್ನೆಗಳು | ಉತ್ತರ |
|---|---|---|
| ಅ | ದೇಶದಲ್ಲಿ ರಾಜ್ಯವು ರೇಷ್ಮೆ ಉತ್ಪಾದನೆಯಲ್ಲಿ ಅತ್ಯಂತ ಮಹತ್ವದ ಸ್ಥಾನ ಹೊಂದಿದ್ದು, ಇತ್ತೀಚಿನ ದಿನಗಳಲ್ಲಿ ಹೊರ ದೇಶಗಳಿಂದ ವಿಶೇಷವಾಗಿ ಚೈನಾದಿಂದ ರೇಷ್ಮೆ ನೂಲು ಆಮದಾಗುತ್ತಿದ್ದು, ಇದರಿಂದ ಸ್ಥಾನೀಯ ರೇಷ್ಮೆ ಬೆಳೆಗಾರರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಚೀನಾ ಮತ್ತು ಇತರೆ ದೇಶಗಳಿಂದ ಆಮದಾಗುವ ರೇಷ್ಮೆ ನೂಲಿನಿಂದ ಸ್ಥಳೀಯ ರೇಷ್ಮೆ ಬೇಡಿಕೆಯ ಮೇಲೆ ಆಗುವ ಪರಿಣಾಮವನ್ನು ಹತೋಟಿಯಲ್ಲಿಡುವ ದೃಷ್ಟಿಯಿಂದ ಹಾಗೂ ಇದರಿಂದ ಸ್ಥಾನೀಯ ರೇಷ್ಮೆ ಬೆಳೆಗಾರರ ಮತ್ತು ರೇಷ್ಮೆ ನೂಲು ಬಿಚ್ಚಾಣಿಕೆದಾರರ ಉತ್ಪಾದನೆಯ ಮೇಲೆ ಆಗುವ ತೊಂದರೆಯನ್ನು ನಿಯಂತ್ರಿಸುವ ಸಂಬಂಧ 2016 ರಿಂದ "Anti-dumping duty" ಯನ್ನು ವಿಧಿಸಲಾಗುತ್ತಿದ್ದು, ಇದು ಜನವರಿ 2021 ರವರೆಗೆ ಚಾಲ್ತಿಯಲ್ಲಿರುತ್ತದೆ. |
| ಆ | ಕಳೆದ ಮೂರು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ ಉತ್ಪಾದನೆಯಾದ ರೇಷ್ಮೆ ಗೂಡಿನ ಪ್ರಮಾಣದ ಜಿಲ್ಲಾವಾರು ಮಾಹಿತಿ ಒದಗಿಸುವುದು. | ಕಳೆದ ಮೂರು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ ಉತ್ಪಾದನೆಯಾದ ರೇಷ್ಮೆ ಗೂಡಿನ ಪ್ರಮಾಣದ ವಿವರ ಕೆಳಕಂಡಂತಿದೆ.<br><table><tr><th>ಕ್ರ.ಸಂ.</th><th>ವರ್ಷ</th><th>ಉತ್ಪಾದನೆಯಾದ ರೇಷ್ಮೆ ಗೂಡು (ಮೆ.ಟನ್)</th></tr><tr><td>1</td><td>2017-18</td><td>66832.60</td></tr><tr><td>2</td><td>2018-19</td><td>83016.68</td></tr><tr><td>3</td><td>2019-20</td><td>79691.30</td></tr></table>ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ. |
| ಇ | ಹೊರದೇಶಗಳಿಂದ ಬರುವ ಈ ರೇಷ್ಮೆ ನೂಲು ಸ್ಥಳೀಯವಾಗಿ ಉತ್ಪಾದಿಸಿದ ನೂಲಿಗಿಂತ ಕಡಿಮೆ ದರದಲ್ಲಿ ಮಾರಾಟವಾಗುತ್ತಿದ್ದು, ಇದರಿಂದ ಸ್ಥಾನೀಯ ರೇಷ್ಮೆ ಬೆಳೆಗಾರರು ಸಂಕಷ್ಟದಲ್ಲಿದ್ದು, ಇವರ ರಕ್ಷಣೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು; | ಸ್ಥಳೀಯ ರೇಷ್ಮೆಯ ದರ ರಕ್ಷಣೆಗಾಗಿ ಹೊರದೇಶ ರಫ್ತುದಾರರು "3ಎ" ಗೂ ಕಡಿಮೆ ದರ್ಜೆಯ ರೇಷ್ಮೆಯನ್ನು ಆ ದೇಶದ ಪ್ರಸ್ತುತದ ಬೆಲೆಗಿಂತಲೂ ಕಡಿಮೆ ಬೆಲೆಯಲ್ಲಿ ಒಳಸುರಿವು (dumping) ಕೈಗೊಂಡಲ್ಲಿ, ಇದಕ್ಕಾಗಿ ಸರ್ಕಾರವು ಪ್ರತಿ ಕೆ.ಜಿ. ರೇಷ್ಮೆಯ ಮೇಲೆ 1.85 ಡಾಲರ್ "Anti-dumping duty" ಯನ್ನು ವಿಧಿಸುತ್ತಿದ್ದು, ಇದರೊಂದಿಗೆ ರೇಷ್ಮೆ ಆಮದಿನ ಮೇಲಿನ Basic Customs duty 10% ಚಾಲ್ತಿಯಲ್ಲಿರುತ್ತದೆ. ಚಾಲ್ತಿಯಲ್ಲಿರುವ 10% Basic Customs dutyಯನ್ನು 30% ಕ್ಕೆ ಹೆಚ್ಚಿಸಲು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. |

| | | |
|---|---|---|
| ಈ | ರೇಷ್ಮೆ ಕೃಷಿಕರಿಗೆ ಉತ್ಪಾದನೆಯಲ್ಲಾಗುವ ಏರುಪೇರು ಹಾಗೂ ಅಮದಿನಿಂದ ಮಾರುಕಟ್ಟೆಯಲ್ಲಾಗುವ ದರಗಳ ಏರಿಳಿತಗಳಿಂದ ತತ್ತರಿಸಿದಾಗ ಸರ್ಕಾರವು ಸಹಾಯಧನವನ್ನು ಕೊಡಲು ಇಚ್ಚಿಸಿದೆಯೇ: | ರೇಷ್ಮೆ ಬೆಳೆಗಾರರು ಬೆಳೆದ ರೇಷ್ಮೆ ಗೂಡಿನ ದರಗಳು ಕುಸಿತಗೊಂಡಾಗ ಸಹಾಯಧನ ನೀಡುವ ಕಾರ್ಯಕ್ರಮವಿರುವುದಿಲ್ಲ. ಆದರೆ, ರೇಷ್ಮೆ ಗೂಡಿನ ಧಾರಣೆಯು ಕುಸಿತಗೊಂಡ ಸಂದರ್ಭದಲ್ಲಿ ರಕ್ಷಣಾತ್ಮಕ ದರವನ್ನು ನೀಡುವ ಮೂಲಕ ರೇಷ್ಮೆ ಬೆಳೆ ಬೆಳೆಯಲು ಪ್ರೋತ್ಸಾಹಿಸಲಾಗುತ್ತಿದೆ. ದ್ವಿತಳಿ ರೇಷ್ಮೆ ಗೂಡಿನ ದರ ಪ್ರತಿ ಕೆ.ಜಿ.ಗೆ ರೂ.260/- ಹಾಗೂ ಮಿಶ್ರತಳಿ ಗೂಡಿನ ದರ ಪ್ರತಿ ಕೆ.ಜಿ.ಗೆ ರೂ.220/-ಕ್ಕಿಂತ ಕಡಿಮೆಯಾದಾಗ ಸರ್ಕಾರದ ಆದೇಶ ಸಂಖ್ಯೆ:ತೋಇ 115 ರೇಕೃವಿ 2018 ದಿನಾಂಕ:26.07.2018ರಂತೆ ಪ್ರತಿ ಕೆ.ಜಿ. ದ್ವಿತಳಿ ಬಿತ್ತನೆ ಗೂಡಿಗೆ ಗರಿಷ್ಠ ರೂ.50/- ಹಾಗೂ ಪ್ರತಿ ಕೆ.ಜಿ. ಮಿಶ್ರತಳಿ ಗೂಡಿಗೆ ಗರಿಷ್ಠ ರೂ.40/-ಗಳಿಗೆ ಮೀರದಂತೆ ರಕ್ಷಣಾತ್ಮಕ ದರ ನೀಡಲು ಕ್ರಮವಹಿಸಲಾಗುತ್ತಿದೆ. |
| ಉ | ಕೊಡುತ್ತಿದ್ದಲ್ಲಿ, ಕಳೆದ ಮೂರು ವರ್ಷಗಳ ಅವಧಿಯಲ್ಲಿ ಬಿಡುಗಡೆ ಮಾಡಿದ ಸಹಾಯಧನದ ವಿವರ ನೀಡುವುದು. | ಅನ್ವಯಿಸುವುದಿಲ್ಲ |

**ಸಂಖ್ಯೆ: ರೇಷ್ಮೆ 87 ರೇಕೃವಿ 2020**

**(ನಾರಾಯಣಗೌಡ)**
**ಪೌರಾಡಳಿತ ಹಾಗೂ ತೋಟಗಾರಿಕೆ**
**ಮತ್ತು ರೇಷ್ಮೆ ಸಚಿವರು**

ಪ್ರಶ್ನೆ ಸಂಖ್ಯೆ 2222ಕ್ಕೆ ಅನುಬಂಧ

**ಕಳೆದ ಮೂರು ವರ್ಷಗಳ ಅವಧಿಯಲ್ಲಿ ಜಿಲ್ಲಾವಾರು ಉತ್ಪಾದನೆಯಾದ ರೇಷ್ಮೆ ಗೂಡಿನ ಪ್ರಮಾಣ(ಮೆ.ಟನ್)**

| ಕ್ರ ಸಂ | ಜಿಲ್ಲೆಗಳು | 2017-18 | 2018-19 | 2019-20 |
|---|---|---|---|---|
| 1 | ಬೆಂಗಳೂರು ಗ್ರಾಮಾಂತರ | 3724.51 | 4117.54 | 3937.385 |
| 2 | ಬೆಂಗಳೂರು ನಗರ | 1088.73 | 1187.89 | 1267.902 |
| 3 | ಚಿಕ್ಕಬಳ್ಳಾಪುರ | 11783.25 | 14504.55 | 12269.406 |
| 4 | ಚಿತ್ರದುರ್ಗ | 647.47 | 851.64 | 845.572 |
| 5 | ದಾವಣಗೆರೆ | 193.74 | 369.42 | 175.419 |
| 6 | ಕೋಲಾರ | 9022.28 | 11136.53 | 10062.454 |
| 7 | ರಾಮನಗರ | 14645.17 | 19801.16 | 19492.606 |
| 8 | ಶಿವಮೊಗ್ಗ | 96.98 | 106.95 | 85.849 |
| 9 | ತುಮಕೂರು | 2722.74 | 3191.75 | 2854.453 |
| 10 | ಚಾಮರಾಜನಗರ | 252.08 | 242.91 | 233.833 |
| 11 | ಚಿಕ್ಕಮಗಳೂರು | 16.91 | 20.48 | 26.8 |
| 12 | ದಕ್ಷಿಣ ಕನ್ನಡ | 1.33 | 1.17 | 1.069 |
| 13 | ಹಾಸನ | 704.39 | 801.76 | 852.615 |
| 14 | ಕೊಡಗು | 3.87 | 3.99 | 4.624 |
| 15 | ಮಂಡ್ಯ | 17187.29 | 20199.02 | 21213.508 |
| 16 | ಮೈಸೂರು | 967.02 | 1226.19 | 1172.883 |
| 17 | ಉಡುಪಿ | 2.31 | 2.31 | 2.622 |
| 18 | ಬಳ್ಳಾರಿ | 585.29 | 922.19 | 1197.307 |
| 19 | ಬೀದರ್ | 196.57 | 228.45 | 153.397 |
| 20 | ಕಲಬುರ್ಗಿ | 216.20 | 275.43 | 239.152 |
| 21 | ಕೊಪ್ಪಳ | 117.67 | 158.20 | 152.819 |
| 22 | ರಾಯಚೂರು | 208.91 | 288.29 | 246.031 |
| 23 | ಯಾದಗಿರಿ | 66.75 | 76.18 | 91.442 |
| 24 | ಬಾಗಲಕೋಟೆ | 257.07 | 357.47 | 372.971 |
| 25 | ಬೆಳಗಾವಿ | 328.67 | 510.93 | 464.756 |
| 26 | ವಿಜಯಪುರ | 86.80 | 143.42 | 134.182 |
| 27 | ಧಾರವಾಡ | 52.82 | 78.27 | 62.319 |
| 28 | ಗದಗ | 195.65 | 265.77 | 293.423 |
| 29 | ಹಾವೇರಿ | 774.39 | 1101.64 | 1109.326 |
| 30 | ಉತ್ತರ ಕನ್ನಡ | 33.80 | 30.67 | 22.647 |
| 31 | ಮೈಸೂರು ಬಿತ್ತನೆ ವಲಯ | 651.95 | 814.53 | 652.544 |
| | **ರಾಜ್ಯದ ಒಟ್ಟು** | **66832.60** | **83016.68** | **79691.30** |